**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ತಿಮ್ಮಯ್ಯ ಇವರ ನಿಯಮ 72 ರಡಿ ಪ್ರಸ್ತಾಪಿಸಿರುವ "ಪಿರಿಯಾಪಟ್ಟಣ ತಾಲ್ಲೂಕು, ಮಾಲಂಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಅಬ್ಬಳತಿ ಎ ಮತ್ತು ಬಿ ಹಾಡಿ, ಮಾಲಂಗಿ ಗೋಮಾಳ, ಚೋರನಕಟ್ಟೆಹಾಡಿ, ಚೌತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಲಕ್ಷ್ಮೀಪುರ ಕಾಲೋನಿ ಹೊಸೂರು ಕೆರೆ ಮಾಳ ಪಂಚವಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಉತ್ತೇನಹಳ್ಳಿ, ಚೌಕೂರು ಹಾಡಿಯ ಒಟ್ಟು 452 ಕುಟುಂಬಗಳನ್ನು 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದನಂತರ ಅರಣ್ಯ ಇಲಾಖೆಯವರು ಅರಣ್ಯದೊಳಗೆ ವಾಸಿಸುತ್ತಿದ್ದ ಅಷ್ಟು ಕುಟುಂಬಗಳನ್ನು ಯಾವುದೇ ಪರ್ಯಾಯ ಪುನರ್ವಸತಿ ಕಲ್ಪಿಸದೆ ಏಕಾಏಕಿ ತಮ್ಮ ಅಧಿಕಾರ ಬಳಸಿ ಅರಣ್ಯದಂಚಿನ ಕಂದಕಗಳ ಬಳಿ ವಾಸಿಸುವಂತೆ ಮಾಡಿ ಇವರುಗಳನ್ನು ಅತಂತ್ರರನ್ನಾಗಿಸಿದ್ದಾರೆ. ಅರಣ್ಯದಿಂದ ಹೊರಹಾಕಲ್ಪಟ್ಟ ಬುಡಕಟ್ಟು ಸಮುದಾಯದ 452 ಕುಟುಂಬಗಳು ಸ್ವಂತ ಸೂರಿಲ್ಲದೆ ಜೀವನೋಪಾಯಕ್ಕಾಗಿ ಆಧಾರವಾಗಿದ್ದ ಜಮೀನು, ಅರಣ್ಯ ಕಿರು ಉತ್ಪನ್ನಗಳ ಆದಾಯವಿಲ್ಲದೆ ಹಸಿವಿನಿಂದ ನರಳುತ್ತಿದ್ದಾರೆ.**

**ಅನುಸೂಚಿತ ಬುಡಕಟ್ಟುಗಳ ಹಾಗೂ ಇತರೆ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯ ಮಾಡುವ) ಅಧಿನಿಯಮ, 2006 (2007ರ-2) ಮತ್ತು ನಿಯಮಗಳು 2008 ಹಾಗೂ ತಿದ್ದುಪಡಿ ನಿಯಮಗಳು 2012ರಡಿಯಲ್ಲಿ ಜೀವಿಸುವ ಸಮುದಾಯದ ಹಕ್ಕುಗಳು ಇರುತ್ತವೆ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ನಡೆಸಿರುವ ಸಮೀಕ್ಷೆ 1998ರ ಪ್ರಕಾರ ಅರಣ್ಯವಾಸಿ ಬುಡಕಟ್ಟುಗಳಿಗೆ ಪುನರ್ವಸತಿ ಕಲ್ಪಿಸುವಂತೆ ವರದಿ ನೀಡಿರುತ್ತಾರೆ. ಅರಣ್ಯದಿಂದ ಹೊರಹಾಕಲ್ಪಟ್ಟ ಕುಟುಂಬಗಳಿಗೆ ನ್ಯಾಯ ಒದಗಿಸಲು ಡಾ|| ಮುಜಫರ್ ಆಸಾದಿ ನೇತೃತ್ವದಲ್ಲಿ ಸರ್ಕಾರದಿಂದ ನೇಮಕಗೊಂಡಿದ್ದ ಸಮಿತಿ ಸಮೀಕ್ಷೆ ನಡೆಸುವಾಗ 452 ಕುಟುಂಬಗಳು ಕೈಬಿಟ್ಟು ಹೋಗಿರುತ್ತದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ಡಾ|| ಮುಜಾಫರ್ ಆಸಾದಿಯವರ ವರದಿ ಆಧಾರದ ಮೇಲೆ ಈಗಾಗಲೇ ಇತರೆ ಪ್ರದೇಶಗಳ 154 ಕುಟುಂಬಗಳಿಗೆ ಪುನರ್‌ವಸತಿ ಕಲ್ಪಿಸಿರುವ ಮಾದರಿಯಲ್ಲಿ 452 ಕುಟುಂಬಗಳಿಗೂ ಪುನರ್ವಸತಿ ಕಲ್ಪಿಸುವ" ವಿಷಯಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.**

******

ಪಿರಿಯಾಪಟ್ಟಣ ತಾಲ್ಲೂಕು, ಮಾಲಂಗಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಅಬ್ಬಳತಿ ಎ ಮತ್ತು ಬಿ ಹಾಡಿ ಮಾಲಂಗಿ ಗೋಮಾಳ, ಚೋರನಕಟ್ಟೆಹಾಡಿ, ಚೌತಿ ಗ್ರಾಮಪಂಚಾಯತಿ ವ್ಯಾಪ್ತಿಯ ಲಕ್ಷ್ಮೀಪುರ ಕಾಲೋನಿ ಹೊಸೂರು ಕೆರೆ ಮಾಳಪಂಚವಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಉತ್ತೇನಹಳ್ಳಿ, ಚೌಕೂರು ಹಾಡಿಯ ಒಟ್ಟು 452 ಕುಟುಂಬಗಳನ್ನು 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದನಂತರ ಯಾವ ಕುಟುಂಬಗಳನ್ನುಅರಣ್ಯದಿಂದ ಹೊರ ಹಾಕಲ್ಪಟ್ಟಿರುವುದಿಲ್ಲ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗಿರಿಜನ ಕುಟುಂಬಗಳನ್ನು ಮಾತ್ರ ಸ್ವಯಂಪ್ರೇರಿತರಾಗಿ ಪುನರ್ವಸತಿಗೊಳ್ಳಲು ಬಯಸಿದ್ದಲ್ಲಿ ಮಾರ್ಗಸೂಚಿಯ ಪ್ರಕಾರ ಪುನರ್ವಸತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ಆದೇಶ ಸಂಖ್ಯೆ: ಅಪಜೀ 339 ಎಫ್‌ಡಬ್ಲ್ಯೂಎಲ್ 2014, ಬೆಂಗಳೂರು, ದಿನಾಂಕ: 23-09-2016 ರನ್ವಯ ಸಮಿತಿ ರಚಿಸಲಾಗಿದ್ದು, ಸದರಿ ಸಮಿತಿಗೆ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು ರವರನ್ನು ಅಧ್ಯಕ್ಷರನ್ನಾಗಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣಧಿಕಾರಿ, ಮೈಸೂರುರವರನ್ನು ಸದಸ್ಯ ಕಾರ್ಯದರ್ಶಿರನ್ನಾಗಿ ಹಾಗೂ ಇನ್ನುಳಿದ ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ.

ದಿನಾಂಕ: 14-08-2017ರಂದು ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರು ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದ ಹೊರಭಾಗದಲ್ಲಿ ವಾಸಿಸುತ್ತಿರುವ 3145 ಗಿರಿಜನರ ಕುಟುಂಬಗಳನ್ನು ಸರ್ವೆ ಮಾಡಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸಮಿತಿಯ ತೀರ್ಮಾನದಂತೆ ಈ ಕೆಳಕಂಡಂತೆ ಪುನರ್ವಸತಿ ಪ್ಯಾಕೇಜ್ ವಿಸ್ತರಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

| ಕ್ರ. ಸಂ | ತಾಲ್ಲೂಕು | ಪ್ರೋ: ಮುಜಾಫರ್ ಅಸ್ಸಾದಿ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಕುಟುಂಬಗಳ ಸಂಖ್ಯೆ | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾಮಟ್ಟದ ಸಮಿತಿ ಸಭೆಯಲ್ಲಿ ಶಿಫಾರಸ್ಸುಮಾಡಿರುವ ಕುಟುಂಬಗಳ ಸಂಖ್ಯೆ |
|---|---|---|---|
| 1 | ಹೆಚ್.ಡಿ.ಕೋಟೆ | 1801 | 1801 |
| 2 | ಹುಣಸೂರು | 1106 | 1032 |
| 3 | ವೀರಾಜಪೇಟೆ | 511 | 312 |
| | **ಒಟ್ಟು** | **3418** | **3145** |

ಸರ್ಕಾರದ ಆದೇಶ ಸಂಖ್ಯೆ: ಅಪಜೀ 193 ಎಫ್‌ಡಬ್ಲ್ಯೂಎಲ್ 2017, ಬೆಂಗಳೂರು, ದಿನಾಂಕ: 04-12-2020 ರಲ್ಲಿ ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯಲ್ಲಿ ಸ್ಥಳಾಂತರಗೊಂಡಿರುವ ಹಾಗೂ ಅಭಯಾರಣ್ಯದ ಹೊರಗೆ ವಾಸಿಸುತ್ತಿರುವ ಗಿರಿಜನ ಕುಟುಂಬಗಳಿಗೆ ಪುನರ್ವಸತಿ ಪ್ಯಾಕೇಜ್ ವಿಸ್ತರಿಸುವ ಕುರಿತು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ: 18-07-2022ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಪುನರ್‌ವಸತಿ ಪ್ಯಾಕೇಜ್ ವಿಸ್ತರಿಸುವ ಬಗ್ಗೆ ಸಾಧಕ ಬಾಧಕಗಳ ಸಭೆಯನ್ನು ನಡೆಸಿ ಅಂತಿಮವಾಗಿ ರೂ.15.00 ಲಕ್ಷಗಳ ಪ್ಯಾಕೇಜ್ ಸೌಲಭ್ಯಗಳನ್ನು ಸ್ಥಳಾಂತರಗೊಂಡಿರುವ 3145 ಕುಟುಂಬಗಳಿಗೆ ವಿಸ್ತರಿಸಬಹುದಾಗಿದೆ ಎಂದು ವರದಿ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

**ಇ-ಸಂಖ್ಯೆ:ಅಪಜೀ 154 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**

C 122